ಗ್ರಾಮೀಣ ಅರಣ್ಯ ಪ್ರದೇಶದಲ್ಲಿ ಗ್ರಾಮಸ್ಥರು ಸಸಿ (ಗಿಡ) ಇರುವಾಗಲೇ ಅರಣ್ಯ ನಾಶ ಮಾಡುತ್ತಿರುವುದು

ಳಿಟಿಟಿ (ಉಳಿಂ) ಶ್ರೀ ಹೆಚ್. ವೈ. ಮೇಟಿ (ಗುಳೇದ ಗುಡ್ಡ).—ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಗ್ರಾಮೀಣ ಅರಣ್ಯ ಪ್ರದೇಶದಲ್ಲಿ ಗ್ರಾಮಸ್ಥರು ಅರಣ್ಯದಲ್ಲಿ ಸಸಿ (ಗಿಡ) ಇರುವಾಗಲೇ ಅದನ್ನು ನಾಶ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಸರ್ಕಾರವು ಅದನ್ನು ನಿರ್ಬಂಧಿಸಲು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ. ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು).—

ಅ) ನಿರ್ದಿಷ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ನಿರ್ದಿಷ್ಟ ಪ್ರಕರಣಗಳು ಬಂದಾಗ, ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

ಬಿಜಾಪುರ ಜಿಲ್ಲೆಯಲ್ಲಿ ಮೀನುಗಾರಿಕಾಭಿವೃದ್ಧಿಗಾಗಿ ಮಾಡಿರುವ ವೆಚ್ಚ ಹಾಗೂ ಲಾಭ

ಳಿಟಿಟ (ಉಳಿಲ) ಶ್ರೀ ಹೆಚ್. ವೈ. ಮೇಟಿ (ಗುಳೇದ ಗುಡ್ಡ).—ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಬಿಜಾಪುರ ಜಿಲ್ಲೆಯಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ೧೯೯೩-೯೪ರ ಸಾಲಿನಲ್ಲಿ ಮಾಡಿದ ಒಟ್ಟು ವೆಚ್ಚ ಎಷ್ಟು ?

ಆ) ೧೯೯೩-೯೪ನೇ ಸಾಲಿನಲ್ಲಿ ಇಲಾಖಾ ಸಿಬ್ಬಂದಿಗಾಗಿ ವೇತನ ಹಾಗೂ ಇತರ ಭತ್ಯೆಗಳಿಗಾಗಿ ಆ ಖರ್ಚು ಎಷ್ಟು ?

ಇ) ಸರ್ಕಾರಕ್ಕೆ ಆ ಇಲಾಖೆಯಿಂದ ಬಂದ ಲಾಭ ಎಷ್ಟು ?

ಶ್ರೀ ವಸಂತ ವಿ. ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು).—

ಅ) ೧೯೯೩-೯೪ನೇ ಸಾಲಿನಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ಈವರೆವಿಗೆ ರೂ. ೩,೪೫,೭೬೪-೦೦ಗಳ ವೆಚ್ಚವಾಗಿರುತ್ತದೆ.

ಆ) ೧೯೯೩-೯೪ನೇ ಸಾಲಿನಲ್ಲಿ ಇಲಾಖೆ ಸಿಬ್ಬಂದಿಯ ವೇತನಕ್ಕಾಗಿ ಮಾಡಲಾದ ಖರ್ಚು ರೂ. ೧೧,೯೪,೩೦೮-೦೦ಗಳು ಮತ್ತು ಇತರ ಭತ್ಯೆಗಾಗಿ ರೂ. ೩೧,೦೦೦-೦೦ಗಳು ವೆಚ್ಚವಾಗಿರುತ್ತವೆ

ಇ) ವಿಜಾಪುರ ಜಿಲ್ಲೆಯಲ್ಲಿ ಮೀನುಗಾರಿಕೆ ಇಲಾಖೆಯಿಂದ ಈವರೆವಿಗೆ ಬಂದಿರುವ ಆದಾಯ ರೂ. ೩,೨೨,೦೦೦-೦೦.

ಅರಣ್ಯ ಆಭಿವೃದ್ಧಿಗೊಳಿಸಲು ಸರ್ಕಾರದವರು ತೆಗೆದುಕೊಂಡ ಕ್ರಮ

ಳಿಟಿಟ (೭೭೯) ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂ).—ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಶಿಗ್ಗಾಂ ತಾಲ್ಲೂಕು ದುಂಡಸಿ ಅರಣ್ಯ ವಲಯದಲ್ಲಿ ಎಷ್ಟು ಎಕರೆ ಅರಣ್ಯ ಪ್ರದೇಶವಿದೆ?

ಆ) ಸದರಿ ಅರಣ್ಯ ಪ್ರದೇಶದಿಂದ ಎಷ್ಟು ಕಟ್ಟಿಗೆಯನ್ನು ಮಾರಾಟ ಮಾಡಲಾಗಿದೆ ?

ಇ) ದುಂಡಸಿ ವಲಯದಲ್ಲಿ ಅರಣ್ಯ ಅಭಿವೃದ್ಧಿಗೊಳಿಸಲು ತೆಗೆದುಕೊಂಡ ಕ್ರಮಗಳೇನು ?

ಈ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಟಿಂಬರ್ ಡಿಪೋಗಳು ಇವೆ ? ಅವು ಯಾವುವು ? ವಿವಿಧ ಪೋಗಳಿಂದ ಎಷ್ಟು ಕಟ್ಟಿಗೆ ಮಾರಾಟವಾಗಿದೆ, ಅದರಿಂದ ಸರ್ಕಾರಕ್ಕೆ ಎಷ್ಟು ಲಾಭವಾಗಿದೆ ?

ಉ) ಅರಣ್ಯ ಪ್ರದೇಶ ಅಭಿವೃದ್ಧಿ ಪಡಿಸಲು ಗಿಡಮರ ಬೆಳೆಸಲು ಸರ್ಕಾರದವರು ತೆಗೆದು ಕೊಂಡ ಕ್ರಮಗಳೇನು ?

ಶ್ರೀ ಎಂ. ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು).—

ಅ) ಶಿಗ್ಗಾಂ ತಾಲ್ಲೂಕು ದುಂಡಸಿ ಅರಣ್ಯ ವಲಯದಲ್ಲಿ ಈ ಕೆಳಕಂಡಂತೆ ಅರಣ್ಯ ಪ್ರದೇಶ ವಿರುತ್ತದೆ.

	ದುಂಡಸಿ	ಸಾವನೂರು	ಕುಂದೂ ಗೋಳ್
೧) ಒಟ್ಟು ಕಾಯ್ದಿಟ್ಟ ಅರಣ್ಯ ಪ್ರದೇಶ	೮೬೫೦.೮೨ ಹೆಕ್ಟೇರ್	೩೪೩.೭೨ ಹೆಕ್ಟೇರ್	೪೭.೦೦ ಹೆಕ್ಟೇರ್
೨) ಸುರಕ್ಷಿತ ಅರಣ್ಯ ಪ್ರದೇಶ	೮೦.೯೩ ಹೆಕ್ಟೇರ್		
೩) ರೆವಿನ್ಯೂ ವೇಸ್ಟ್ ಲ್ಯಾಂಡ್	೧೫೩೫.೦೧ ಹೆಕ್ಟೇರ್		

ಆ) ಅರಣ್ಯ ಪ್ರದೇಶದಿಂದ ನೇರವಾಗಿ ಯಾವುದೇ ಕಟ್ಟಿಗೆಯನ್ನು ಮಾರಾಟ ಮಾಡುವುದಿಲ್ಲ. ಆದರೆ ಅಲ್ಲಿಂದ ಉತ್ಪನ್ನವನ್ನು ಇಲಾಖೆಯಿಂದ ತೆಗೆದಿರುವ ಮತ್ತು ಅರಣ್ಯಗುನ್ನೇ ಪ್ರಕರಣದಲ್ಲಿ ಕಚ್ಚಾ ಮಾಡಿರುವ ಕಟ್ಟಿಗೆಗಳನ್ನು ಮಾರಾಟ ಮಾಡಲಾಗುವುದು. ಶಿಗ್ಗಾಂ ತಾಲ್ಲೂಕು ದುಂಡಸಿ ಅರಣ್ಯ ಪ್ರದೇಶದಿಂದ ಕಟ್ಟಿಗೆಯನ್ನು ಮಾರಾಟ ಮಾಡಿದ ವಿವರ ಈ ಕೆಳಕಂಡಂತಿದೆ.

ವರ್ಷ	ಟಿಂಬರ್ ಘ.ಮಿ	ಉರುವಲು ಕಟ್ಟಿಗೆ ಘ.ಮಿ	ಪೋಲ್ಸ್ ನಂ.	ಬಂದ ಆದಾಯ ರೂಪಾಯಿ
೧೯೯೧-೯೨	೪೨.೬೮೭	೯೮೫.೭೨	೫೪೧೮೮	೩,೨೫,೭೭೦-೦೦
೧೯೯೨-೯೩	೩.೬೪೭	೨೦.೦೦	೨೪೨	೧೪,೮೨೫-೦೦
೧೯೯೩-೯೪	೬೪.೮೫೫	೪೬೨.೧೨	೨೫೯೧	೧,೧೪,೭೪೦-೦೦

(ತೆರಿಗೆಗಳು ಪ್ರತ್ಯೇಕ)

ಇ) ದುಂಡಸಿ ವಲಯದಲ್ಲಿ ಬೇರೆ ಬೇರೆ ಅರಣ್ಯ ಅಭಿವೃದ್ಧಿ ಯೋಜನೆಯಲ್ಲಿ ಈ ಕೆಳಕಂಡ ಅರಣ್ಯೀಕರಣ ಅರಣ್ಯ ಅಭಿವೃದ್ಧಿ ಕೆಲಸವನ್ನು ತೆಗೆದುಕೊಂಡು ಕಳೆದ ಮೂರು ವರ್ಷದಲ್ಲಿ ನಡುತೋಪುಗಳನ್ನು ಬೆಳೆಸಲಾಗಿದೆ.

೧೯೯೧-೯೨	ಡಿಪಿಎಪಿ	೨೫ ಹೆಕ್ಟೇರ್
೧೯೯೨-೯೩	ಕ್ಷೀಣಿತ ಅರಣ್ಯ ಅಭಿವೃದ್ಧಿ	೯೦ ಹೆಕ್ಟೇರ್
	ಡಿಪಿಎಪಿ	೩೦ ಹೆಕ್ಟೇರ್
೧೯೯೩-೯೪	ಡಿಪಿಎಪಿ ರಸ್ತೆ ಬದಿ	೪೦ ಹೆಕ್ಟೇರ್

ನೆಡುತೋಪು ೮ ಕಿ.ಮೀ.

ಈ ಮೇಲ್ಕಂಡ ಯೋಜನೆಗಳಡಿಯಲ್ಲಿ ವಿವಿಧ ಜಾತಿಲಯ ಸಸಿಗಳನ್ನು ಬೆಳೆಸಿ ನಡುತೋಪುಗಳನ್ನು ಬೆಳೆಸಲಾಗಿದೆ.

ಈ) ಕರ್ನಾಟಕ ರಾಜ್ಯದಲ್ಲಿ ಒಟ್ಟು ೫೦ ಟಿಂಬರ್ ಡಿಪೋಗಳಿದ್ದು, ಅವುಗಳ ವಿವರ ಈ ಕೆಳಕಂಡಂತಿದೆ. ದಾಂಡೇಲಿ, ಆಳ್ನಾವರ, ಕಿರುವತ್ತಿ, ಮುಂದಗೋಡ, ಜೋಯಿಡ, ಹಟ್ಟಿಕೆರೆ, ಕುಮಟಾ, ಕಬಿನ ಹೆಕ್ಕಲು, ಇಡುಗಂಡಿ, ಕದ್ರಾ,ಹೊಸಕಂಬಿ, ಕಟಗಲ್, ಜಿಪಗಿ, ಮಾನವಾನ್, ಶಿವಮೊಗ್ಗ, ತರೀಕೆರೆ, ಕಡೂರು, ಚಿಕ್ಕಮಗಳೂರು, ಭದ್ರಾವತಿ, ಲಕ್ಕವಳ್ಳಿ, ಎನ್. ಆರ್ ಪುರ, ರ, ಕುಂಸಿ, ತಾಳಗುಪ್ಪ, ಆನಂದಪುರ, ಅನವಟ್ಟಿ, ಹೊಸನಗರ, ಶಿಕಾರಿಪುರ, ಶೃಂಗೇರಿ, ಕೊಪ್ಪ, ಸಾಗ

ಆಯನೂರು, ತಾವರಗಟ್ಟಿ, ಖಾನಾಪುರ, ಎರೇಹಳ್ಳಿ, ನಂಜನಗೂಡು, ಮೈಸೂರು, ಚಾಮರಾಜನಗರ, ಹುಣಸೂರು, ಕಳ್ಳಬೆಟ್ಟ, ಕುಶಾಲನಗರ, ಪಂಡ್ಯ, ಕೀರ್ತಾನದಿ, ಬೈರಮಂಗಲ ಸೂಳ್ಯ, ಮಂಗಳೂರು ನೆಟ್ಟಾಣ, ಮಣ್ಣಾಗುಂಡಿ, ಪುತ್ತೂರು, ಸಂಗಮೇಶ್ವರಪೇಟೆ, ಒಟ್ಟಿಗೆ.
ಮೇಲ್ಕಂಡ ಡಿಪೋಗಳಿಂದ ಪ್ರಾರಂಭವಾದ ಕಟ್ಟಿಗೆ ಮತ್ತು ಅದರಿಂದ ಸರ್ಕಾರಕ್ಕೆ ಬಂದ ಆದಾಯದ ವಿವರ ಈ ಕೆಳಕಂಡಂತಿದೆ:—

ವರ್ಷ	ಬೆಂಬಿಮರ ಘನ ಮೀಟರ್	ಸಾಗುವಾನಿ ಘ.ಮೀ.	ಇತರೆ ಜಾತಿಯ ಮರ ಘ.ಮೀ.	ಸರ್ಕಾರಕ್ಕೆ ಬಂದ ಆದಾಯ ಲಕ್ಷ ರೂ.
೧೯೯೧–೯೨	೫,೯೪೫	೧೩,೫೮೭	೯೬,೬೮೪	೪೧೪೧.೪೨
೧೯೯೨–೯೩	೪.೨೨೮	೫,೬೦೫	೪೫.೨೭೩	೪೨೯೫.೮೭
೧೯೯೩–೯೪	೨,೦೭೪	೨,೭೨೫	೮೩,೧೪೮	೨೭೯೧.೦೧

(ನವೆಂಬರ್ ೯೩ರವರೆಗೆ)

ಉ) ರಾಜ್ಯದಲ್ಲಿ ಅರಣ್ಯ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಇವುಗಳಲ್ಲಿ ರಾಜ್ಯಯೋಜನೆ, ಕೇಂದ್ರ ಯೋಜನೆ, ಕೇಂದ್ರ ಪುರಸ್ಕೃತ ಯೋಜನೆಗಳು ಸೇರಿವೆ. ಅಲ್ಲದೆ ಜಿಲ್ಲಾ ಪರಿಷತ್‌ಗಳು ನಡೆಸುವ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳ ಅಡಿಯಲ್ಲಿ ಡಿ.ಪಿ.ಎ.ಪಿ. ಟಿ.ಆರ್.ವೈ. ಸಾಮಾಜಿಕ ಅರಣ್ಯ ಇತ್ಯಾದಿ ಕಾರ್ಯಕ್ರಮಗಳ ಅಡಿಯಲ್ಲಿ ಅರಣ್ಯ ವಿಭಾಗಗಳಿಗೆ ಅರಣ್ಯಾಭಿವೃದ್ಧಿಗಾಗಿ ಅನುದಾನ ನೀಡಲಾಗುತ್ತಿದೆ. ಹಲವು ಹೊಸ ಯೋಜನೆಗಳ ಅಡಿಯಲ್ಲಿ ಹೊಸ ನೆಡುತೋಪುಗಳನ್ನು ಬೆಳೆಸಲಾಗುತ್ತಿದೆ. ಕೆಲವು ಯೋಜನೆಗಳ ಅಡಿಯಲ್ಲಿ ಈಗಿರುವ ಅರಣ್ಯಗಳನ್ನು ಬೆಂಕಿ ಮತ್ತು ಜಾನುವಾರುಗಳಿಂದ ರಕ್ಷಿಸಲಾಗುತ್ತಿದೆ.

ಗುಲ್ಬರ್ಗಾ ಜಿಲ್ಲೆಯಲ್ಲಿ ಮೀನುಗಾರಿಕೆ ಇಲಾಖೆಯಿಂದ ಮೀನುಗಾರಿಕಾ ಅಭಿವೃದ್ಧಿ

೪೭೦(೭೮೨) ಶ್ರೀ ಬಸವಂತರೆಡ್ಡಿ ಪೋತಕಪಲ್ಲಿ (ಸೇಡಂ).—ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ೧೯೯೧–೯೨, ೧೯೯೨–೯೩ ಸಾಲುಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ಸರ್ಕಾರ ರೂಪಿಸಿರುವ ಯೋಜನೆಗಳೇನು?

(ಆ) ಗುಲ್ಬರ್ಗಾ ಜಿಲ್ಲೆಯಲ್ಲಿ ಯೋಜನೆಗಳಿಗಾಗಿ ವಿರ್ಚು ಮಾಡಿರುವ ಹಣವೆಷ್ಟು?

(ಇ) ಆ ಯೋಜನೆಗಳಿಗಾಗಿ ೧೯೯೧–೯೨, ೧೯೯೨–೯೩ ಸಾಲುಗಳಲ್ಲಿ ವಿರ್ಚು ಮಾಡಿದ ಹಣ ವೆಷ್ಟು? (ತಾಲ್ಲೂಕುವಾರು ಹಾಗೂ ಗ್ರಾಮವಾರು ವಿವರಗಳನ್ನು ನೀಡುವುದು)

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು).—

(ಅ) ೧೯೯೧–೯೨, ೧೯೯೨–೯೩ ರ ಸಾಲಿನಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸಲು ಹಲವಾರು ಯೋಜನೆಗಳನ್ನು ಈ ಕೆಳಕಾಣಿಸಿದಂತೆ ಹಮ್ಮಿಕೊಳ್ಳಲಾಗಿದೆ :

೧) ಕಟ್ಟಡಗಳು.
೨) ಮೀನು ಕ್ಷೇತ್ರಗಳ ನಿರ್ಮಾಣ.
೩) ಮೀನುಮರಿ ಉತ್ಪಾದನೆ, ಸಾಕಣೆ ಮತ್ತು ಹಂಚಿಕೆ.
೪) ಮೀನುಗಾರಿಕೆ ಸಾಮಗ್ರಿಗಳಿಗಾಗಿ ಸಹಾಯಧನ.
೫) ಮೀನು ಕೊಳಗಳ ನಿರ್ಮಾಣಕ್ಕೆ ಸಹಾಯಧನ.
೬) ಮೀನುಮರಿ ಕ್ಷೇತ್ರಗಳ ವಿಸ್ತರಣೆ.